**ಶಿವಮೊಗ್ಗ ನಗರಸಭೆ**

**975 (1048) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) :** ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಸಭಾ ವ್ಯಾಪ್ತಿಯ ಗೋಪಾಲಗೌಡ ಬಡಾವಣೆಯ ನಿವೇಶನದ ಸರ್ವೆ ನಂಬರ್ 67/1 ರಲ್ಲಿನ ಪಾರ್ಕನ್ನು ಅಭಿವೃದ್ಧಿ ಪಡಿಸಲು ಷರತ್ತು ಮೇರೆಗೆ ಪಡೆದ ವ್ಯಕ್ತಿ ಪಾರ್ಕನಲ್ಲಿ ಅಕ್ರಮ ಕಟ್ಟಡ ಕಟ್ಟಿರುವುದು ಹಾಗೂ ಸಾರ್ವಜನಿಕ ಉಪಯೋಗಕ್ಕೆ ಈ ಪಾರ್ಕ್ ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಪಾರ್ಕ್‌ನಲ್ಲಿ ಕಟ್ಟಡ ನಿರ್ಮಿಸಲು ವಿನ್ಯಾಸ ನಕ್ಷೆಯನ್ನು SUDA ಮತ್ತು ಶಿವಮೊಗ್ಗ ನಗರಸಭೆಯಿಂದ ಅನುಮೋದಿಸಲಾಗಿದೆಯೇ ಅಥವಾ ಶಿವಮೊಗ್ಗ ನಗರಸಭೆಯಿಂದ ಲೈಸೆನ್ಸ್ ಪಡೆದು ಕಟ್ಟಲಾಗಿದೆಯೇ;

ಇ) ಈ ಕಟ್ಟಡದ ಅಕ್ರಮ ಒತ್ತುವರಿಯನ್ನು ಯಾವಾಗ ತೆರೆವು ಗೊಳಿಸಲಾಗುವುದು ಅಥವಾ ಸರ್ಕಾರದ ವಶಕ್ಕೆ ತೆಗೆದುಕೊಂಡು ಸರ್ಕಾರಿ/ ಸಾರ್ವಜನಿಕ ಉದ್ದೇಶಕ್ಕೆ ಬಳಸಲಾಗುವುದೇ (ವಿವರಿಸುವುದು)?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :**

ಅ) ಸರ್ವೆ ನಂ. 67/1ರ ಖಾಸಗಿ ವಿನ್ಯಾಸದ ಉದ್ಯಾನವನದಲ್ಲಿ ಯಾವುದೇ ಕಟ್ಟಡ ನಿರ್ಮಾಣವಾಗಿರುವುದಿಲ್ಲ. ಈ ಉದ್ಯಾನವನ ಸಾರ್ವಜನಿಕ ಉಪಯೋಗಕ್ಕೆ ಲಭ್ಯವಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**ಸಹಕಾರ ಸಂಸ್ಥೆಗಳ ನಿರ್ದೇಶಕರುಗಳ ವಿದೇಶ ಪ್ರವಾಸ**

**978 (909) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) :** ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಸಹಕಾರಿ ರಾಜ್ಯಮಟ್ಟದ ಸಂಸ್ಥೆಗಳಾದ ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್, ಅಪೆಕ್ಸ್ ಬ್ಯಾಂಕ್, ಕೆ.ಎಂ.ಎಫ್. ಮತ್ತು ರಾಜ್ಯದ ವಸತಿ ಮಹಾಮಂಡಳಿಯ ಹಾಗೂ ಇತರೆ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳಿಂದ ಚುನಾಯಿತ ಹಾಗೂ ನಾಮನಿರ್ದೇಶಕರು ಅಧಿಕಾರಿಗಳು/ಅಧಿಕಾರೇತರ ನಿರ್ದೇಶಕರುಗಳು ಕಳೆದ 3 ವರ್ಷಗಳಲ್ಲಿ ವಿದೇಶ ಪ್ರವಾಸ ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಪ್ರತಿ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳ ಚುನಾಯಿತ ಹಾಗೂ ನಾಮನಿರ್ದೇಶಕರು, ಅಧಿಕಾರಿಗಳು/ಅಧಿಕಾರೇತರ ನಿರ್ದೇಶಕರುಗಳು ಪ್ರತಿ ವರ್ಷ ಪ್ರವಾಸ ಕೈಗೊಂಡ ದೇಶಗಳು, ಅದಕ್ಕಾಗಿ ಕಳೆದ 3 ವರ್ಷಗಳಿಂದ ಪ್ರತಿ ಪ್ರವಾಸಕ್ಕೂ ಸಂಸ್ಥೆಗಳು ವೆಚ್ಚ ಮಾಡಿದ ಹಣದ ಪೂರ್ಣ ಮಾಹಿತಿಯನ್ನು ನೀಡುವುದು;

**ಶ್ರೀ ಲಕ್ಷ್ಮಣ ಸ. ಜಾರಕಿಹೋಳಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ) :**
ಅ) ಹೌದು.

ಆ)

| ಕ್ರ. ಸಂ. | ಸಂಸ್ಥೆಯ ಹೆಸರು | ಪ್ರವಾಸ ಕೈಗೊಂಡ ವರ್ಷ | ಪ್ರವಾಸ ಕೈಗೊಂಡ ಅಧಿಕಾರ/ನಿರ್ದೇಶಕರುಗಳ ವಿವರ | ಪ್ರವಾಸ ಕೈಗೊಂಡ ದೇಶಗಳು | ಪ್ರವಾಸಕ್ಕಾಗಿ ವೆಚ್ಚ ಮಾಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1. | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ.ಬೆಂಗಳೂರು. | 2011-12 | ಚುನಾಯಿತ ಹಾಗೂ ನಾಮ ನಿರ್ದೇಶಿತ ನಿರ್ದೇಶಕರುಗಳು ಮತ್ತು ಅಧಿಕಾರಿಗಳು | ಇಂಗ್ಲೆಂಡ್, ಹಾಲೆಂಡ್, ಜರ್ಮನಿ, ಆಸ್ಟ್ರಿಯಾ, ಇಟಲಿ, ಸ್ವಿಟ್ಜರ್ ಲ್ಯಾಂಡ್, ಫ್ರಾನ್ಸ್ | 46.00 |
| 2. | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ, ಬೆಂಗಳೂರು | 2008-09 | ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ<br><br>ನಿರ್ದೇಶಕರುಗಳು<br>ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಅಮೆರಿಕ ಮತ್ತು ಕೆನಡಾ<br><br>ಅಮೆರಿಕಾ<br><br>ಫ್ರಾನ್ಸ್ ಮತ್ತು ಇಂಗ್ಲೆಂಡ್ | 7.68<br><br>26.32<br><br>5.15 |
| | | 2009-10 | ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ<br><br>ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳು | ನ್ಯೂಜೆಲ್ಯಾಂಡ್ ಮತ್ತು ಆಸ್ಟ್ರೇಲಿಯಾ<br><br>ಜಪಾನ್ ಮತ್ತು ದಕ್ಷಿಣ | 6.50<br><br>75.55 |

| | | | | | |
|---|---|---|---|---|---|
| | | | | ಕೋರಿಯಾ | |
| | | 2010–11 | ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ<br><br>ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು | ಬೀಜಿಂಗ್ ಮತ್ತು ಚೀನಾ<br><br>ದಕ್ಷಿಣ ಆಫ್ರಿಕಾ ಮತ್ತು ದುಬೈ | 4.17<br><br>88.86 |
| 3 | ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ.ಬೆಂ. | 2010–11 | ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು | ಚೀನಾ ಹಾಗೂ ಸ್ವೀಡನ್ | 0.97 |
| 4 | ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ. ಬೆಂಗಳೂರು | 2009–10<br><br>2010–11 | ನಿರ್ದೇಶಕರುಗಳು ಮತ್ತು ಅಧಿಕಾರಿಗಳು<br><br>ನಿರ್ದೇಶಕರುಗಳು ಮತ್ತು ಅಧಿಕಾರಿಗಳು | ಯೂರೋಪ್ ರಾಷ್ಟ್ರಗಳು<br><br>ಅಮೆರಿಕಾ ಮತ್ತು ಕೆನಡಾ | 29.00<br><br>6.00 |
| 5 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು | 2010–11 | ಚುನಾಯಿತ ಹಾಗೂ ನಾಮ ನಿರ್ದೇಶಿತ ನಿರ್ದೇಶಕರುಗಳು | ಇಂಗ್ಲೆಂಡ್, ಈಜಿಪ್ಟ್, ದುಬೈ | 35.00 |
| 6 | ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ. ಬೆಂಗಳೂರು | 2011–12 | ಚುನಾಯಿತ ಹಾಗೂ ನಾಮ ನಿರ್ದೇಶಿತ ನಿರ್ದೇಶಕರುಗಳು | ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಇಟಲಿ, ಸ್ವಿಟ್ ಜರ್‌ಲ್ಯಾಂಡ್, ದುಬಾಯಿ | 49.04 |

## ಗೃಹ ನಿರ್ಮಾಣ ಸಂಘಗಳು

**979 (910) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)** : ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು; ಇವುಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಸಂಘಗಳೆಷ್ಟು; (ಸಹಕಾರ ಸಂಘಗಳ ಹೆಸರು ವಿಳಾಸ ಸಹಿತ ಮಾಹಿತಿ ನೀಡುವುದು);

ಆ) ಬೆಂಗಳೂರು ನಗರ ಹಾಗೂ ಮೈಸೂರು ನಗರಗಳಲ್ಲಿ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು; ಅವುಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಸಂಘಗಳೆಷ್ಟು;